<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>

<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>

**C.C. No.1104/2025** **PW:1**

ದಿಃ **18.06.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಹಾಯಕ ಸರ್ಕಾರಿ ಅಬಿಯೊಜಕರು ತೆರೆದ ನ್ಯಾಯಾಲಯದಲ್ಲಿ ದೋಷಾರೋಪಾಣಾ ಪಟ್ಟಿಯ ಜೊತೆಯಲ್ಲಿರುವ ಸಿಡಿಯನ್ನು ಲ್ಯಾಪಟಾಪನಲ್ಲಿ ಹಾಕಿ ವಿಡಿಯೊ ತೊರಿಸಿದ್ದು ಅದನ್ನು ಆರೋಪಿತರ ಪರ ವಕೀಲರು ನೋಡಿರುತ್ತಾರೆ. ಸದರಿ ಸಿ.ಡಿಯ ಪ್ರತಿಯನ್ನು ನಿಪಿ.4 ಎಂದು ಗುರುತಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ ಸಿ ಬಿ ಜಿ ವಕೀಲರಿಂದಃ**

ನನಗೆ ಇನಸ್ಟಾಗ್ರಾಮ್ ಆ್ಯಪ್ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಇನಸ್ಟಾಗ್ರಾಮ್ ಆ್ಯಪ್ ಖಾತೆಗಳ ನಿರ್ವಹಣೆಯ ಬಗ್ಗೆ ನನಗೆ ತರಬೇತಿ ಆಗಿದೆ. ನನಗೆ ತರಬೇತಿ ಆದ ಬಗ್ಗೆ ಪ್ರಮಾಣಪತ್ರಗಳನ್ನು ನೀಡಿಲ್ಲ. ನನಗೆ ಯಾವದೇ ತರಬೇತಿ ಆಗದೇ ಇರುವುದರಿಂದ ತರಬೇತಿ ಪ್ರಮಾಣಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಇನಸ್ಟಾಗ್ರಾಮ್ ಖಾತೆಯನ್ನು ಗಣಕಯಂತ್ರದಲ್ಲಿ ಮಾಡಬಹುದು ಮತ್ತು ತೆರೆಯಬಹುದು ಎಂದರೆ ಸಾಕ್ಷಿ ಗಣಕಯಂತ್ರದಲ್ಲಿ ತೆರೆಯಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಇನಸ್ಟಾಗ್ರಾಮಲ್ಲಿ ಪೇಕ್ ಐ.ಡಿ ಒಬ್ಬರ ಹೆಸರಿನಿಂದ ಇನ್ನೊಬ್ಬರು ಮಾಡಬಹುದು ಎಂದರೆ ಸರಿ. ಇನ್ಸ್ಟಗ್ರಾಮ ಖಾತೆಗೂ ಮತ್ತು ಮೊಬೈಲ್ ನಂಬರಗೂ ಲಿಂಕ್ ಇರುವುದಿಲ್ಲ ಎಂದರೆ ಸಾಕ್ಷಿ ಲಿಂಕ್ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಮುಖ್ಯವಿಚಾರಣೆಯಲ್ಲಿ ಹೇಳಿದ ಇನಸ್ಟಾಗ್ರಾಮ ಖಾತೆಗೆ ಯಾವ ಮೊಬೈಲ್ ನಂಬರ ಇತ್ತು ಅಂತಾ ಹೇಳಲು ಆಗುವುದಿಲ್ಲ. ನನ್ನ ದೂರಿನಲ್ಲಿ ಇನಸ್ಟಾಗ್ರಾಮ ಖಾತೆ ಯಾರ ಮೊಬೈಲ ನಂಬರಗೆ ಸಂಬಂದಪಟ್ಟದ್ದು ಅಂತಾ ತೊರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ತಾನು ಐಡಿ ತೊರಿಸಿದ್ದೇನೆ ಎಂದು

ನುಡಿಯುತ್ತಾರೆ. ನಿಪಿ.4 ಸಿ.ಡಿ ಇರುವ ವಿಡಿಯೊದಲ್ಲಿ ಆರೋಪಿಗಳ ಧ್ವನಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೂ ಮತ್ತು ಇನ್ಸ್ಟಾಗ್ರಾಮ ಖಾತೆಗಳಿಗೂ ಸಂಬಂದವಿಲ್ಲ ಎಂದರೆ ಸರಿಯಲ್ಲ.

2. ಸೈಬರ್ ಅಪರಾಧಿಗಳಿಗೆ ಹಾಗೂ ಸಾಮಾಜಿಕ ಜಾಲತಾಣಗಳ ಅಪರಾಧಗಳಿಗೆ ಸಂಬಂದಪಟ್ಟಂತೆ ಪ್ರತ್ಯೇಕ ಪೊಲಿಸ್ ಠಾಣೆ ಇದೆ ಎಂದರೆ ಸರಿ. ನಾನು ಪ್ರತಿದಿನ ಮಾಡುವ ಕಾರ್ಯದ ದಿನಚರಿ ನಿರ್ವಹಿಸಿದ್ದೇನೆ ಎಂದರೆ ಸರಿ. ಈ ಘಟನಗೆ ಸಂಬಂದಪಟ್ಟಂತೆ ದಿನಚರಿಯಲ್ಲಿ ಬರೆದಿದ್ದೇನೆ ಎನ್ನುವುದು ನೆನಪಿಲ್ಲ. ನಾನು ಇದನ್ನು ದಿನಚರಿಯಲ್ಲಿ ಬರೆಯದೇ ಇರುವುದರಿಂದ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.4 ಸಿ.ಡಿಯಲ್ಲಿ ತೊರಿದ ವಿಡಿಯೊ ನೋಡಿ ಭಯಬಿತರಾಗಿದ್ದೇವೆ ಅಂತಾ ಯಾವದೇ ಸಾರ್ವಜನಿಕರು ನಮ್ಮ ಠಾಣೆಗೆ ದೂರು ಕೊಟ್ಟಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಯಾವದೊ ಒಂದು ವಿಡಿಯೊಗೆ ಆಡಿಯೊವನ್ನು ಮಿಕ್ಸ ಮಾಡಿ ಅದನ್ನು ಹರಿಬಿಡುವದು ನಡೆದಿದೆ ಎಂದರೆ ಸರಿ. ಎ.ಐ ಕಾಲದಲ್ಲಿ ಏನು ಬೇಕಾದರು ವಿಡಿಯೊಗಳನ್ನು ಮಾಡಬಹುದು ಎಂದರೆ ಸರಿ. ಈ ಪ್ರಕರಣಕ್ಕೂ, ವಿಡಿಯೊಕ್ಕೂ ಮತ್ತು ಆರೋಪಿಗಳಿಗೂ ಏನು ಸಂಬಂದ ಇರದೇ ಇದ್ದರೂ ಸಹ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಿಡಿಯೊಕ್ಕೆ ಆರೋಪಿ 2 ಮತ್ತು 3 ರವರು ಕಮೆಂಟ ಮಾಡಿದ್ದಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇನ್ಸ್ಟಾಗ್ರಾಮದಲ್ಲಿ ಎಷ್ಟು ಜನ ಫಾಲೊ ಮಾಡಿದರು ಎಷ್ಟು ಜನ ಕಮೆಂಟ ಮಾಡಿದರು ಅಂತಾ ಬರುತ್ತದೆ ಎಂದರೆ ಸರಿ. ಕಮೆಂಟ ಮಾಡಿದವರೆಲ್ಲರ ಮೇಲೆಯೂ ದೂರು ನೀಡಿದ್ದೇನೆ. ದೂರು ನೀಡುವಾಗ 6 ಜನ ಕಮೆಂಟ ಮಾಡಿದ್ದರು. 6 ಜನರ ಮೇಲೆ ದೂರು ನೀಡಿದ್ದೇನೆ ಎಂದರೆ ಸರಿ. ನಿಪಿ.4 ಸಿ.ಡಿ ಯಲ್ಲಿ ಇರುವ ವಿಡಿಯೊ ಒಂದು ಕನ್ನಡ ಚಿತ್ರಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ವಿಡಿಯೊದಲ್ಲಿ ಆರೋಪಿ 1 ಅಜಿತ ಅತ್ತರವಾಲೆ ಹಾಗೂ ಇನ್ನೊರ್ವ ರವಿ ಅತ್ತರವಾಲೆ ಇರುತ್ತಾರೆ. ನಿಪಿ.4 ಸಿ.ಡಿ ಯಲ್ಲಿ ಇರುವ ವಿಡಿಯೊಕ್ಕೂ ಮತ್ತು ಆಡಿಯೊಕ್ಕೂ ಹಾಗೂ ಹಾವಭಾವಗಳಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ಪೊಟೊ ಕೂಡಿಸಿ ಅದಕ್ಕೆ ಆಡಿಯೊ ಅಟ್ಯಾಚ್ ಮಾಡಿ ವಿಡಿಯೋ ಅಪ್ಲೋಡ ಮಾಡುವ ಸಾದ್ಯತೆ ಇದೆ ಎಂದು ನುಡಿಯುತ್ತಾರೆ. ಆರೋಪಿಗಳಿಗೂ ಮತ್ತು ವಿಡಿಯೊಕ್ಕೂ

ಯಾವದೇ ಸಂಬಂದ ಇರದಿದ್ದರೂ ಸಹ  ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.